ಹಣವಾಗಲಿ ಇದೆಯೇ... ನೀವೇ ನೋಡಿ... ಇಲ್ಲ ತಾನೇ?'' ಎಂದೆಲ್ಲ ಖಾತ್ರಿಪಡಿಸಲು ಯತ್ನಿಸುತ್ತಿದ್ದ. ಆದರೆ, ಆ ಕುಹಕಿಗಳು ನಂಬಬೇಕಲ್ಲ!

"ತೊಲಗಾಚೆ... ಮುದಿಗೂಬೆ! ಕತೆ ಕಟ್ತಾನೆ... ಕತೆ!''

ಅವನದೀಗ ಅಸಹಾಯಕ ಮುನಿಸು. ಏನಿದು ಅನ್ಯಾಯ ಯಾರೊಬ್ಬರೂ ತನ್ನನ್ನು ನಂಬುತ್ತಿಲ್ಲವಲ್ಲ! ಯಾಕೆ ಇವತ್ತು ಹೀಗೆಲ್ಲಾ ಆಯಿತು... ನಿರಾಸೆ ಹತಾಶೆಗಳಿಂದ ಶಕ್ತಿಯೆಲ್ಲ ಸೋರಿಹೋದಂತಾಯಿತು. ದಿಕ್ಕೆಟ್ಟು ಕಂಪಿಸಿದ.

ಇತ್ತ ತೆರೆ ತೆರೆಯಾಗಿ ಕತ್ತಲು ಕವಿದು ಸಂಜೆಯೂ ಆಯ್ತು. ತನ್ನ ಹಳ್ಳಿಗಂತೂ ಆತ ಹಿಂತಿರುಗಲೇ ಬೇಕಾಗಿತ್ತು. ಕೆಲವು ಪರಿಚಿತರೊಂದಿಗೆ ಊರ ದಾರಿ ಹಿಡಿದ ಆತ. ದಾರಿಯಲ್ಲಿ ಅವರಿಗೆ ತಾನು ತಂತಿಯ ತುಂಡನ್ನು ಎತ್ತಿಕೊಂಡ ಜಾಗವನ್ನು ತೋರಿಸಿದ. ದೈವದ ಆಣೆಗೂ ಅದು ಒಂದು ತಂತಿ ಮಾತ್ರವೇ ಆಗಿತ್ತು ಎಂದೂ ಬೇರೇನೂ ಅಲ್ಲವೆಂದೂ ದಾರಿಯುದ್ದಕ್ಕೂ ಬಡಬಡಿಸುತ್ತಲೇ ಇದ್ದ.

ಆಮೇಲೆ ಊರನ್ನು ತಲುಪಿದೊಡನೆ ಅವನು ಮನೆಗೆ ಹೋಗಲಿಲ್ಲ. ಊರನ್ನೆಲ್ಲಾ ಒಂದು ಸುತ್ತು ಹೊಡೆದ. ಕಂಡಕಂಡವರಿಗೆಲ್ಲ ತನ್ನ ಕತೆಯನ್ನು ಹೇಳಿಕೊಂಡ. ಆದರೆ, ಎಲ್ಲರೂ ಅವನನ್ನು ಸಂಶಯದಿಂದಲೇ ನೋಡಿದರು. ಭಾರವಾದ ಎದೆಯಿಂದ ಅವನು ಮನೆಗೇನೋ ಹೋದ. ಆದರೆ, ರಾತ್ರಿಯ ವೇಳೆಗೆ ಜ್ವರ ಬಂದಂತಾಗಿ ನಿಶ್ಶಕ್ತನಾದ.

ಮರುದಿನ ಮಧ್ಯಾಹ್ನದ ವೇಳೆಗೆ ಈ ಪ್ರಕರಣ ಹೊಸತೊಂದು ತಿರುವನ್ನು ಪಡೆದುಕೊಂಡಿತು. ಕಳೆದುಹೋಗಿದ್ದ ಪಾಕೆಟ್ ಪುಸ್ತಕ ಬ್ರೆಟನ್ ಎಂಬ ಶ್ರೀಮಂತನ ಬಳಿ ಕೆಲಸಕ್ಕಿದ್ದ ಮೇರಿಯಸ್‌ಗೆ ಸಿಕ್ಕಿತು. ಆದರೆ, ಅವನು ಅನಕ್ಷರಸ್ಥ. ಪುಸ್ತಕದ ವಿವರಗಳನ್ನು ಓದಲು ಬಾರದೆ ಕೊಂಡೊಯ್ದು ತನ್ನ ಒಡೆಯನಿಗೆ ಕೊಟ್ಟ. ಆಮೇಲದು ಸ್ವಲ್ಪ ಹೊತ್ತಿನಲ್ಲಿ ನಿಜವಾದ ವಾರಸುದಾರನನ್ನು ಸೇರಿತು.

ಈ ಬಿಸಿ ಬಿಸಿ ಸುದ್ದಿ ಎಲ್ಲೆಡೆ ಹರಡಿತು. ಅಪಾದಿತನೆಂದು ಭಾವಿಸಲಾಗಿದ್ದ ಹಾಶ್‌ಕಾಮ್‌ನಿಗೂ ವಿಷಯವನ್ನು ತಿಳಿಸಲಾಯಿತು. ಅವನಂತೂ ಹರ್ಷಾತಿರೇಕದಿಂದ ಕುಣಿಯುವುದೊಂದೇ ಬಾಕಿ! ಒಂದಿಷ್ಟೂ ತಡಮಾಡಲಿಲ್ಲ ಅವನು. ದೌಡಾಯಿಸಿದ ಮುಖ್ಯ ವೃತ್ತದ ಕಡೆಗೆ! ಅಲ್ಲಂತೂ ಎಂದಿನಂತೆ ಜನರ ಗುಂಪು ಇದ್ದೇ ಇತ್ತು. ಸುಖಾಂತ್ಯ ಕಂಡ ತನ್ನ ಸತ್ಯ ಪ್ರಾಮಾಣಿಕ ಕಥನವನ್ನು ಅವನು ಎಲ್ಲರಿಗೂ ಮೈಯ್ಯುಬ್ಬಿಸಿ ಬಣ್ಣಿಸಿದ.

"ನೋಡಿ ಪ್ರಿಯ ಮಿತ್ರರೇ... ಯಾವನೋ ಒಬ್ಬ ಧೂರ್ತನ ಅಸಹ್ಯ ಸುಳ್ಳಿನಿಂದ ನನ್ನಂಥ ನಿಸ್ಪೃಹ ವ್ಯಕ್ತಿ ವಿನಾಕಾರಣ ಅವಮಾನಕ್ಕೆ ಗುರಿ ಆಗಬೇಕಾಯಿತು. ಆದರೇನು? ಕಡೆಗೂ ನಿಜಾಂಶ ಹೊರಗೆ ಬಂದೇ ಬಂತಲ್ವಾ..." ಎಂದು ವಿಜಯದ ವಿಶಾಲ ಮಂದಹಾಸ ಬೀರಿದ.

ಆ ದಿನವಂತು ಆ ಬಡಪಾಯಿ ಇಡೀದಿನ ತನ್ನ ಈ ಪ್ರವರವನ್ನು ಎದೆಯುಬ್ಬಿಸಿ ಹೇಳಿದ್ದೇ ಹೇಳಿದ್ದು! ಹೆದ್ದಾರಿಯಲ್ಲಿ ಅವರ ಪಾಡಿಗೆ ನಡೆದು ಹೋಗುವ ಯಾತ್ರಿಕರಿಗೆ, ಮತ್ತರಾಗಿ ಕೂತು ಮತ್ತಷ್ಟು ಕುಡಿಯುವವರಿಗೆ, ಮಂದಿರದಲ್ಲಿ ಪ್ರಾರ್ಥನೆ ಮುಗಿಸಿ ಹೊರಬೀಳುವ ಶ್ರದ್ಧಾವಂತರಿಗೆ, ಇವ ತಡೆತಡೆದು ತನ್ನ ಕತೆಯನ್ನು ನಿರೂಪಿಸಿದ! ಏನನ್ನೋ ಸಾಧಿಸಿದಂತೆ ಹಿಗ್ಗಿದ!

ಇದೀಗ ಅವನು ಶಾಂತವಾಗಿರುವಂತೆ ಕಂಡುಬಂದರೂ, ಒಳಗಿಂದೊಳಗೆ ಅವನ ಅರಿವಿಗೆ ಬಾರದ ಯಾವುದೋ ಕಳವಳ ಬಾಧಿಸುತ್ತಲೇ ಇತ್ತು. ತಾನು ಎಷ್ಟೇ ನಿಸ್ಪೃಹತೆಯಿಂದ ಮಾತಾಡಿದರೂ ಕೇಳುವವರ ಮುಖದ ಮೇಲಿನ ವ್ಯಂಗ್ಯ ನಗೆ ಅವನನ್ನು ಚುಚ್ಚಿ ಚುಚ್ಚಿ ನೋಯಿಸುತ್ತಿತ್ತು. ಇನ್ನು ತನ್ನ ಬೆನ್ನ ಹಿಂದಿನ ತನ್ನ ಬಗೆಗಿನ ಕುಚೋದ್ಯಗಳಂತೂ ಅವನಿಗೆ ಗೊತ್ತೇ ಗೊತ್ತು.

ಮರು ಮಂಗಳವಾರ ಗುಡರ್ ವಿಲ್‌ನಲ್ಲಿ ಎಂದಿನಂತೆ ಸಂತೆ ತಪ್ಪದೇ ಸೇರಿತು. ಬೀದಿಯಲ್ಲಿ ಹಾದುಹೋಗುವಾಗ ಯಥಾಪ್ರಕಾರ ಮನೆಯ ಮುಂದೆಯೇ ಕಾದಿದ್ದವನಂತೆ ನಿಂತಿದ್ದ